ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ
ಹಾಗೂ ಎಫ್.ಟಿ.ಎಸ್.ಸಿ-**1,** ಹಾವೇರಿ
ಎಸ್.ಸಿ. **13/2024**

PW-04

CW-08

| | |
|---|---|
| ಸಾಕ್ಷಿದಾರರ ಹೆಸರುಃ | ಶಿವಕುಮಾರ ಕೃಷ್ಣಪ್ಪ ಚಿಕ್ಕಣಗಿ |
| ವಯಸ್ಸುಃ | 26 ವರ್ಷ |
| ಉದ್ಯೋಗಃ | ಮೆಕ್ಯಾನಿಕ್ |
| ಹಾಲಿ ವಾಸ ಸ್ಥಳಃ | ಗೆಜ್ಜಿಹಳ್ಳಿ ತಾಃ ಹಾನಗಲ್ಲ |

ದಿನಾಂಕ**: 21.03.2025** ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು**.**

ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಅಭಿಯೋಜಕರಿಂದಃ

ಚಾಸಾ-1 ಗೊತ್ತು. ಇವರು ನನ್ನ ಚಿಕ್ಕಪ್ಪ. ಸದರಿಯವರು ನಮ್ಮೂರಿನ ಗ್ರಾಮ ಪಂಚಾಯತಿ ಸದಸ್ಯರಾಗಿರುತ್ತಾರೆ. ಚಾಸಾ-6 , 8 , 11 ರಿಂದ 23 ರವರು ಗೊತ್ತು. ಆರೋಪಿತರು ಗೊತ್ತು. 1 , 2 ನೇ ಆರೋಪಿತರು ನಮ್ಮೂರಿನವರು. 3 ನೇ ಆರೋಪಿಯ ಕಾಲವೆ ಕಲ್ಲಾಪೂರ ಗ್ರಾಮದವನು.

2022 ರಲ್ಲಿ ನಮ್ಮೂರಲ್ಲಿ ದ್ಯಾಮವ್ವ ಉರ್ಫ ಕೆಂಗಣ್ಣ ದುರ್ಗಾದೇವಿ ಜಾತ್ರೆ ಇತ್ತು. ತಾಃ22.03.2022 ರಂದು ಚಾಸಾ-1 ರವರು ಜಾತ್ರೆಯ ನಿಮಿತ್ತ ದ್ಯಾಮವ್ವ ದೇವಿಯ ಮೂರ್ತಿಯ ಮೆರವಣಿಗೆ ಮಾಡಲು ಟ್ರ್ಯಾಕ್ಟರನ್ನು ಸಿದ್ದಪಡಿಸಿ ರಾತ್ರಿ ಮನೆಗೆ ವಾಪಸ್ಸಾಗುತ್ತಿದ್ದೆವು. ಚಾಸಾ-1 ರವರು ಅಲ್ಲಿಯೇ ಅವರ ಮನೆ ಬಳಿ ಇದ್ದರು. ಆಗ ರಾತ್ರಿ 10.00 ರ ಸುಮಾರಿಗೆ 1 ರಿಂದ 3 ಜನ ಆರೋಪಿತರು KA-27/EJ-8339 ನಂಬರಿನ ಬೈಕನಲ್ಲಿ ಬಂದು ಚಾಸಾ-1 ರವರನ್ನು ಕುರಿತು ಅವರ ಓಣಿಗೆ ನೀರು ಯಾಕೆ ಬಿಟ್ಟಿಲ್ಲ ಎಂದು ಕೇಳಿ ಅವರ ಎದೆಯ ಮೇಲಿನ ಅಂಗಿ ಹಿಡಿದು ಎಳೆದಾಡಿದರು. ಆಗ ನಾನು, ಚಾಸಾ-7 ಮತ್ತು 8 ಸೇರಿ ಬಿಡಿಸಿಕೊಳ್ಳಲು ಹೋಗಿದ್ದು, ಅಷ್ಟರಲ್ಲಾಗಲೇ 1 ನೇ ಆರೋಪಿಯು ತನ್ನ ಮೋಟರ ಸೈಕಲನಲ್ಲಿದ್ದ ಬ್ಯಾಗನಲ್ಲಿದ್ದ ಚಾಕುವನ್ನು ತೆಗೆದುಕೊಂಡು ಬಂದು, ಅದನ್ನು ಚಾಸಾ-7 ರವರ ಎಡ ಪಕ್ಕಡಿಗೆ ಮತ್ತು ಬೆನ್ನಿಗೆ ಚುಚ್ಚಿದರು. ಅದರಿಂದಾಗಿ ಅವರಿಗೆ ರಕ್ತಗಾಯವಾಗಿತ್ತು. ಬಿಡಿಸಲು ಹೋದ ನನಗೂ ಸಹ ಬೆನ್ನಿನ ಮೂರು ಕಡೆ 1 ನೇ ಆರೋಪಿಯು ಚಾಕುವಿನಿಂದ ಬೆನ್ನಿಗೆ ಚುಚ್ಚಿ ರಕ್ತಗಾಯಪಡಿಸಿದರು. ಅದೇ ರೀತಿ ಬಿಡಿಸಲು ಬಂದ ಚಾಸಾ-6 ರವರಿಗೂ ಸಹ ಬಲಗೈ ಅಂಗೈಗೆ 1 ನೇ ಆರೋಪಿಯು ರಕ್ತಗಾಯಪಡಿಸಿರುತ್ತಾನೆ. ಆಗ ಚಾಸಾ-11 ರಿಂದ 20 ರವರು ಹಾಗೂ ಇನ್ನಿತರರು ಬಂದು

ನಮ್ಮನ್ನು ಸಂತೈಸಿ ಆರೋಪಿತರಿಂದ ಬಿಡಿಸಿಕೊಂಡಿರುತ್ತಾರೆ. ಆರೋಪಿತರು ಸ್ಥಳದಿಂದ ಓಡಿಹೋಗಿರುತ್ತಾರೆ. ಅಲ್ಲಿ ವಿದ್ಯುತ್ ಬೀದಿ ದೀಪದ ಬೆಳಕು ಇತ್ತು. ಗಾಯಗೊಂಡ ನನ್ನನ್ನು, ಚಾಸಾ-6 ಮತ್ತು 7 ರವರನ್ನು ಖಾಸಗಿ ವಾಹನದಲ್ಲಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಗೆ ಉಪಚಾರಕ್ಕಾಗಿ ಕಳುಹಿಸಿಕೊಟ್ಟರು. ನನ್ನನ್ನು ಮತ್ತು ಚಾಸಾ-7 ಹೆಚ್ಚಿನ ಉಪಚಾರಕ್ಕಾಗಿ ಹಾನಗಲ್ಲ ಸರ್ಕಾರಿ ಆಸ್ಪತ್ರೆಯಿಂದ ಹಾವೇರಿ ಜಿಲ್ಲಾಸ್ಪತ್ರೆಗೆ ಅಲ್ಲಿಂದ ಕೀಮ್ಸ ಆಸ್ಪತ್ರಗೆ ಹುಬ್ಬಳ್ಳಿಗೆ ಕಳುಹಿಸಿರುತ್ತಾರೆ. ನಾನು ಕೀಮ್ಸ ಆಸ್ಪತ್ರೆಯಲ್ಲಿ ಒಂದು ವಾರಗಳ ಕಾಲ ಚಿಕಿತ್ಸೆ ಪಡೆದಿರುತ್ತೇನೆ. ಸದರಿ ಘಟನೆಯ ರಾತ್ರಿ 10.00 ಸುಮಾರಿಗೆ ನಡೆದಿರುತ್ತದೆ. ಅಲ್ಲಿ ಮೊಬೈಲ್ ಮತ್ತು ವಿದ್ಯುತ್ ದೀಪದ ಬೆಳಕು ಇತ್ತು. ಆರೋಪಿತರು ನೀರು ಬಿಡದ ಹಿನ್ನೆಲೆಯಿಂದ ಚಾಕು ಹಿಡಿದುಕೊಂಡು ಹಲ್ಲೆ ಮಾಡಿದರು. ಪ್ರಕರಣದ ಕುರಿತು ದೂರು ದಾಖಲಾಗಿರುತ್ತದೆ. ಈ ಬಗ್ಗೆ ಪೋಲಿಸರು ನನ್ನನ್ನು ಆಸ್ಪತ್ರೆಗೆ ಬಂದು ವಿಚಾರಿಸಿ ನನ್ನ ಹೇಳಿಕೆ ಮಾಡಿಕೊಂಡಿರುತ್ತಾರೆ. ಆರೋಪಿಯು ನನ್ನನ್ನು ಚುಚ್ಚಿ ಗಾಯ ಪಡಿಸಲು ಬಳಸಿದ ಚಾಕುವನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೆ ಮುಮಾ-1 ಎಂದು ಗುರುತಿಸಲಾಗಿದೆ. ಸದರಿ ಪ್ರಕರಣದ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇಲ್ಲ. ಆರೋಪಿತರು ನ್ಯಾಯಾಲಯದ ಮುಂದೆ ಇರುತ್ತಾರೆ.

(ಈ ಹಂತದಲ್ಲಿ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷಿಯ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

3 ಜನ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಹೊಡಿ ಬಡಿ ಮಾಡಿ ಗಾಯಪಡಿಸಿರುತ್ತಾರೆ ಎಂದರೆ ಸರಿ. ಜಗಳವನ್ನು ಬಿಡಿಸಿಕೊಳ್ಳಲು ಹೋದ ಚಾಸಾ-1 ರವರ ಅಣ್ಣನ ಮಗಳು ಮತ್ತು ಚಾಸಾ-1 ರವರ ಹೆಂಡತಿ ಮನೆಯಿಂದ ಹೊರಗೆ ಅವರನ್ನು ಬಿಡಿಸಿಕೊಳ್ಳಲು ಬಂದ ಚಾಸಾ-9 , 10 ರವರಿಗೆ ಆರೋಪಿತರು ಅವರನ್ನು ಎಳೆದಾಡಿ , ಜಗ್ಗ ದೂಡಿ ಅವರ ಹೆಣ್ಣು ತನದ ಮಾನಭಂಗ ಮಾಡಿದರು ಎಂದರೆ ಸರಿ. 1 ನೇ ಆರೋಪಿಯು ಚಾಸಾ-1 ರವರನ್ನು ಕುರಿತು ಯಾಕೆ ಮೆಂಬರ್ ಆಗಿದಿಯಲೇ ಸೂಳೇ ಮಗನೇ ಅಂತಾ ಅವಾಚ್ಯ ಶಬ್ದಗಳಿಂದ ಬೈದು, ಅವನನ್ನು ಕೊಲ್ಲುವ ಉದ್ದೇಶದಿಂದ ಹಲ್ಲೆ ಮಾಡಿರುತ್ತಾರೆ ಎಂದರೆ ಸರಿ. ಚಾಸಾ-1 ರವರು ಮಾರನೇ ದಿನ ಬೆಳಿಗ್ಗೆ ಹಾನಗಲ್ಲ ಠಾಣೆಗೆ ಹೋಗಿ ದೂರನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ಆರೋಪಿತರು ಬಳಸಿದ ವಾಹನದ ನಂಬರ KA-27/EJ-8339 ಕೆಂಪು ಬಣ್ಣದ ಬಜಾಜ್ ಕಂಪನಿಯದ್ದಾಗಿತ್ತು ಎಂದರೆ ಸರಿ. ನನ್ನ ನೆನಪಿನ ಕೊರತೆಯ ಕಾರಣ ನನ್ನ ಮುಖ್ಯ ವಿಚಾರಣೆಗಳನ್ನು ಸದರಿ ವಿಷಯಗಳನ್ನು ಹೇಳಲಾಗಲಿಲ್ಲ.

ಪಾಟೀ ಸವಾಲು ಆರೋಪಿತರ  ಪರ ವಕೀಲರಿಂದಃ

ಆರೋಪಿ ಪರ ವಕೀಲರು ಅರ್ಜಿ ಸಲ್ಲಿಸಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಯ್ತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಸಮಕ್ಷಮ ನನ್ನ ಉಕ್ತ ಲೇಖನದ ಮೇಲೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಜಿಲ್ಲಾ ಮತ್ತು ಸತ್ರ
ನ್ಯಾಯಾಧೀಶರು ಮತ್ತು ಎಫ್.ಟಿ.ಎಸ್.ಸಿ-1
ಹಾವೇರಿ.